# 7. ಶಿಕ್ಷಕರ ದಿನಾಚರಣೆ



ಡಾ|| ಸರ್ವಪಲ್ಲಿ ರಾಧಾಕೃಷ್ಣನ್, ಶಿಕ್ಷಣ ಸಂಸ್ಕೃತಿಯ ಹರಿಕಾರ. ಭಾರತದ ಮಹಾನ್ ತತ್ವಜ್ಞಾನಿ, ವೇದಾಂತಿ ಉನ್ನತ ರಾಜನೀತಿಜ್ಞ, ಮೇರು ಶಿಕ್ಷಕ, ಡಾ|| ಎಸ್. ರಾಧಾಕೃಷ್ಣನ್ ತಮ್ಮ ಸುದೀರ್ಘ ಜೀವಿತಾವಧಿಯಲ್ಲಿ ಭಾರತ ಸಂಸ್ಕೃತಿಯ ಹರಿಕಾರರಾಗಿ ಮೆರೆದು, ಭಾರತದ ಕೀರ್ತಿಯನ್ನು ವಿಶ್ವಾದ್ಯಂತ ಹರಡಿದರು. ಸೆಪ್ಟೆಂಬರ್ 5 ರಂದು ಡಾ|| ರಾಧಾಕೃಷ್ಣನ್ ರವರ ಜನ್ಮದಿನವನ್ನು ''ಶಿಕ್ಷಕರ ದಿನವನ್ನಾಗಿ'' ಪ್ರತಿ ವರ್ಷವೂ ಆಚರಿಸಲಾಗುತ್ತಿದೆ.

ಡಾ|| ಎಸ್. ರಾಧಾಕೃಷ್ಣನ್‌ರು ತಮಿಳುನಾಡಿನ ಚಿತ್ತೂರು ಜಿಲ್ಲೆಯ ತಿರುತ್ತಣಿ ಕ್ಷೇತ್ರದಲ್ಲಿ 1888 ಸಪ್ಟೆಂಬರ್ 5 ರಂದು ಜನಿಸಿದರು. ಸರ್ವಪಲ್ಲಿ ವೀರಸ್ವಾಮಿ ಮತ್ತು ಸೀತಮ್ಮ ದಂಪತಿಗಳಿಗೆ ಎರಡನೆಯ ಮಗ. ರಾಧಾಕೃಷ್ಣನ್ ಮನೆತನ ಮೂಲತಃ ಆಂಧ್ರದ ನೆಲ್ಲೂರ ಜಿಲ್ಲೆಯ ಸರ್ವಪಲ್ಲಿಯವರು ಸರ್ವಪಲ್ಲಿ ಎಂಬುವುದು ಮನೆತನದ ಹೆಸರು. ವೀರಸ್ವಾಮಿ ತಹಶೀಲ್ದಾರ್ ಕಛೇರಿಯಲ್ಲಿ ಕಾರಕೂನರಾಗಿದ್ದರು. ಹಣಕಾಸಿನ ಪರಿಸ್ಥಿತಿಯೇನು ಅಷ್ಟೇನೂ ಉತ್ತಮವಿರಲಿಲ್ಲ. ದೇವರಲ್ಲಿ ಭಕ್ತಿ. ಆಧ್ಯಾತ್ಮಿಕತೆಯಲ್ಲಿ ನಂಬಿಕೆ ಇಟ್ಟಿದ್ದ ಬಾಲಕ ರಾಧಾಕೃಷ್ಣನ್ ಅಭ್ಯಾಸದಲ್ಲಿ ತುಂಬ ಏಕಾಗ್ರತೆಯುಳ್ಳವರಾಗಿದ್ದರು. ತಿರುತ್ತಣಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಪೂರೈಸಿದ ನಂತರ ತಿರುಪತಿಯ ಲೂಥರ್ ಮಿಷನ್ ಸ್ಕೂಲಿನಲ್ಲಿ ಹೈಸ್ಕೂಲು ವಿದ್ಯಾಭ್ಯಾಸ ಮಾಡಿದರು.

ಮದ್ರಾಸ್ ವಿಶ್ವವಿದ್ಯಾಲಯದಿಂದ 1909ರಲ್ಲಿ ಎಂ. ಎ ಪದವಿಪಡೆದ ನಂತರ ಮದ್ರಾಸಿನ ಪ್ರಸಿದ್ಧ ಕಾಲೇಜೊಂದರಲ್ಲಿ ತತ್ವಶಾಸ್ತ್ರದ ಅಧ್ಯಾಪಕರಾಗಿ ನೇಮಕರಾದರು. ಮುಂದೆ ಅದೇ ಕಾಲೇಜಿನಲ್ಲಿ ಪ್ರಾಚಾರ್ಯರೂ ಆದರು 1926 ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದಿಂದ ''ಡಿಲಿಟ್'' ಪದವಿ ಪಡೆದ ಅವರು, ದೇಶದ ವಿವಿಧ ಶಿಕ್ಷಣ ಸಂಸ್ಥೆಯಲ್ಲಿ ವಿಶ್ವವಿದ್ಯಾಲಯಗಳಲ್ಲಿ ಉಪಕುಲಪತಿಗಳಾಗಿ ಸೇವೆಸಲ್ಲಿಸಿದರು.

ತತ್ವಶಾಸ್ತ್ರದಲ್ಲಿ ರಾದಾಕೃಷ್ಣರ್‌ನಂತೆ ಸಾಧನೆ ಗೈದವರು ತುಂಬಾ ವಿರಳ. ಅವರು ಭಾರತೀಯ ತತ್ವಜ್ಞಾನ ಪರಿಷತ್ತಿನ ಅಧ್ಯಕ್ಷರು ಆಗಿದ್ದರು. ಭಾರತೀಯ ತತ್ವಶಾಸ್ತ್ರಕ್ಕೆ ವಿಶ್ವದಲ್ಲಿ ವಿಶಿಷ್ಟ ಸ್ಥಾನ ಗಳಿಸಿಕೊಟ್ಟ ಮಹಾಮೇಧಾವಿಗಳಲ್ಲಿ ಮುಂಚೂಣಿಯಲ್ಲಿದ್ದವರು.

ಬ್ರಿಟಾನಿಯಾ ಜ್ಞಾನಕೋಶಕ್ಕೆ ಭಾರತೀಯ ತತ್ವಶಾಸ್ತ್ರದ ಮೌಲಿಕ ಲೇಖನ ರಚಿಸಿದ ಹಿರಿಮೆ ಅವರದು. ಡಾ|| ರಾಧಾಕೃಷ್ಣನ್‌ರು ತಮ್ಮ ವಿದ್ವತ್‌ಪೂರ್ಣ ಲೇಖನಗಳಿಂದ ಪಾಂಡಿತ್ಯಪೂರ್ಣ ಉಪನ್ಯಾಸಗಳಿಂದ ಭಾರತೀಯ ತತ್ವಶಾಸ್ತ್ರದ ಪ್ರಕಾಶನವನ್ನು ವಿದೇಶಿಯರ ಮನದಂಗಳದಲ್ಲಿ ಬಿಂಬಿಸಿದರು.

ಡಾ|| ರಾಧಾಕೃಷ್ಣನ್ ಉತ್ತಮ ವಾಗ್ಮಿ. ಅವರ ಉಪನ್ಯಾಸ ಶೈಲಿ ಅತ್ಯಂತ ಜನಾಕರ್ಷಣೆಯವಾಗಿತ್ತು. ಅವರ ಉಪನ್ಯಾಸಗಳು ಎಷ್ಟೊಂದು ಪಾಂಡಿತ್ಯಪೂರ್ಣಗಳಾಗಿದ್ದವು ಎಂದರೆ ವಿದೇಶಿಯರೇ ಅವರ ಉಪನ್ಯಾಸಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಲು ಮುಂದೆ ಬಂದರು. ಆಕ್ಸ್‌ಫರ್ಡ ವಿಶ್ವವಿದ್ಯಾಲಯದಲ್ಲಿ ಅಮೇರಿಕದ ಹಾರ್ವರ್ಡ ವಿಶ್ವವಿದ್ಯಾಲಯದಲ್ಲಿ ಚಿಕಾಗೋ ವಿಶ್ವವಿದ್ಯಾಲಯದಲ್ಲಿ ಅವರು ಉಪನ್ಯಾಸ ನೀಡಿದ್ದು ಇಲ್ಲಿ ಉಲ್ಲೇಖನೀಯ ಅವರ ಭಾರತೀಯ ತತ್ವಶಾಸ್ತ್ರ ಕೃಷಿ ತತ್ವಜ್ಞಾನದಲ್ಲೊಂದು ಮೈಲಿಗಲ್ಲು.

ವಿಶ್ವವಿದ್ಯಾಲಯಗಳ ಶಿಕ್ಷಣದಲ್ಲಿ ಸಮಗ್ರ ಬದಲಾವಣೆತರಲು ಡಾ।। ರಾಧಾಕೃಷ್ಣನ್‌ರನ್ನು ಶಿಕ್ಷಣ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಲಾಗಿತ್ತು. ವಿಶ್ವವಿದ್ಯಾಲಯದ ಶಿಕ್ಷಣದ ಲೋಪ – ದೋಷಗಳಿಗೆ ಬೆಳಕು ಚೆಲ್ಲಿದ ಅವರು ಆಗಬೇಕಾದ ಬದಲಾವಣೆಗಳಿಗಾಗಿ ಕೈಕೊಳ್ಳಬೇಕಾದ ಯೋಜನೆಯ ವಿವರ ಸಲ್ಲಿಸಿದರು.

1916 ರಲ್ಲಿ ರಾಜ ಮಹೇಂದ್ರಿಯ ಸರಕಾರ ಕಲಾ ಕಾಲೇಜಿನಲ್ಲಿ ಪ್ರೊಫೆಸರ್ ಆಗಿ ನೇಮಕವಾದರು. ರಾಧಾಕೃಷ್ಣನ್ ಈ ಸಂದರ್ಭದಲ್ಲಿಯೇ ತನ್ನ ಅಪಾರ ವಿದ್ವತ್ತಿನಿಂದ ವಿದ್ಯಾರ್ಥಿಗಳ ಮೇಲೆ ವಿಶೇಷ ಪ್ರಭಾವ ಬೀರಿದ ಅವರು, ಟಾಗೋರ್ ಅವರ ತತ್ವಜ್ಞಾನ ಎಂಬ ಉನ್ನತ ಮಟ್ಟದ ಜ್ಞಾನಾಂತರ್ಗತ ಪುಸ್ತಕ ಪ್ರಕಟಿಸಿ ಜನಪ್ರಿಯರಾದರು. ತದನಂತರ 1918ರಲ್ಲಿ ಮೈಸೂರ ವಿಶ್ವವಿದ್ಯಾಲಯದ ಮಹಾರಾಜಾ ಕಾಲೇಜಿನ ತತ್ವಶಾಸ್ತ್ರದ ಪ್ರಾಧ್ಯಾಪಕರಾಗಿ, ಮೈಸೂರಿನಲ್ಲಿ ವಿದ್ಯಾರ್ಥಿಗಳ ಮೇಲೆ ಗಾಢ ಪರಿಣಾಮ ಬೀರಿದ ಡಾ।। ರಾಧಾಕೃಷ್ಣನ್ ಪ್ರಸಕ್ತ ತತ್ವಜ್ಞಾನದಲ್ಲಿ ಧರ್ಮದ ಪ್ರಭುತ್ವ ಎಂಬ ಗ್ರಂಥವನ್ನು ರಚಿಸಿ ಜಗದ್ವಿಖ್ಯಾತರಾದರು. ರಾಧಾಕೃಷ್ಣನರವರ ಅಮೋಘ ವಿದ್ವತ್ತಿನ ಕೀರ್ತಿ ವಿಶ್ವದಾದ್ಯಂತ ಹರಡಿದಾಗ 1921ರಲ್ಲಿ ಕಲ್ಕತ್ತ ವಿಶ್ವವಿದ್ಯಾಲಯದ ಉಪಕುಲಪತಿ ಅಶುತೋಷ ಮುಖರ್ಜಿಯವರು ಆಮಂತ್ರಣದ ಮೇರೆಗೆ ಕೊಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರದ ಪ್ರಾಧ್ಯಾಪಕರಾದರು. ಡಾ.. ರಾಧಾಕೃಷ್ಣನ್ ಭಾರತ ಸಂಸ್ಕೃತಿಯ ಹರಿಕಾರರಾಗಿ ದೇಶವಿದೇಶಗಳಲ್ಲಿ ಸುತ್ತಿದರು. 1931ರಲ್ಲಿ ಆಂಧ್ರ ವಿಶ್ವವಿಧ್ಯಾಲಯದ ಉಪಕುಲಪತಿಗಳಾಗಿನೇಮಕಗೊಂಡು ಉತ್ತಮ ಶೈಕ್ಷಣಿಕ ವಾತಾವರಣವನ್ನು ನಿರ್ಮಿಸಿ ಹಲವಾರು ಸುಧಾರಣೆಗಳಿಗೆ ಕಾರಣರಾದರು.

ಡಾ।। ರಾಧಾಕೃಷ್ಣನ್‌ರು ಒಬ್ಬ ಆದರ್ಶ ಶಿಕ್ಷಕರೂ ಆಗಿದ್ದರು. ಅವರಿಗೆ ಅಪಾರ ಶಿಷ್ಯವೃಂದವಿತ್ತು. ಅವರ ಹಾಗೂ ಶಿಷ್ಯರ ಸಂಬಂಧ ಹೇಗಿತ್ತು ಎಂಬುದಕ್ಕೆ ಒಂದು ಘಟನೆಯನ್ನು ಕೇಳಿ, ಅವರು ಮೈಸೂರು ವಿಶ್ವವಿದ್ಯಾಲಯದ ಉನ್ನತ ಹುದ್ದೆಗೆ ನೇಮಿಸಿರುವುದಾಗಿ ಆದೇಶವಾಯಿತು. ಬೀಳ್ಕೊಡುವ ಸಮಾರಂಭಕ್ಕೆ ಅವರ ಅಪಾರ ಶಿಷ್ಯವೃಂದ ನೆರೆದಿತ್ತು. ಅವರು ಸಮಾರಂಭ ಮುಗಿಸಿಕೊಂಡು ಹಾಗೆಯೇ ರೈಲ್ವೆ ನಿಲ್ದಾಣಕ್ಕೆ ಹೋಗುವವರಿದ್ದರು. ಅವರನ್ನು ಕರೆದೊಯ್ಯಲು ಕುದುರೆ ಗಾಡಿಯೊಂದು ಸಿದ್ದವಾಗಿತ್ತು. ಆಗ ಅವರ ಶಿಷ್ಯರು ಕುದುರೆಯನ್ನು ಬಿಚ್ಚಿ ಅದಕ್ಕೆ ತಾವೇ ಹೆಗಲು ಕೊಟ್ಟು ಗುರುವನ್ನು ನಿಲ್ದಾಣದವರೆಗೆ ಹೊತ್ತೊಯ್ದರು. ಆ ದೃಶ್ಯ ನೆರೆದವರ ಕಂಗಳಲ್ಲಿ ನೀರು ತರಿಸಿತ್ತು.

ರಾಧಾಕೃಷ್ಣನ್ ಮಹಾನ್ ಪ್ರಜಾಪ್ರಭುತ್ವವಾದಿಯಾಗಿದ್ದರು. 1931 – 36ರಲ್ಲಿ ಆಂಧ್ರ ವಿಶ್ವವಿದ್ಯಾಲಯ 1936– 48 ರ ಅವಧಿಯಲ್ಲಿದೆಹಲಿ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದರು. 1946 – 51 ರ ವರೆಗೆ ಯುನೆಸ್ಕೊದಲ್ಲಿ ಭಾರತದ ನಿಯೋಗದ ನಾಯಕರಾಗಿದ್ದರು. 1949 ರಿಂದ 1952 ರವರೆಗೆ ಸೋವಿಯಟ್ ರಶಿಯಾದಲ್ಲಿರಾಯಭಾರಿಯಾಗಿದ್ದರು. ಈ ಸಂದರ್ಭದಲ್ಲಿ ಅಂದಿನ ಸೋವಿಯಟ್ ನಾಯಕ ಸ್ಟಾಲಿನ್ ಮೇಲೂ ವಿಶೇಷ ಪ್ರಭಾವ ಬೀರಿದರು. 1952ರಲ್ಲಿ ಭಾರತಕ್ಕೆ ಹಿಂದಿರುಗಿದ ರಾಧಾಕೃಷ್ಣನ್ ಉಪರಾಷ್ಟ್ರಪತಿಯಾಗಿ ಆಯ್ಕೆಯಾಗಿ 1962 –11 ರಂದು ರಾಷ್ಟ್ರಪತಿಯಾಗಿ ಆಯ್ಕೆಯಾದರು. 1967ರಲ್ಲಿ ಆ ಹುದ್ದೆಯಿಂದ ನಿವೃತ್ತರಾದರು.

ಡಾ।। ರಾಧಾಕೃಷ್ಣನ್ ಸರ್ವಧರ್ಮಗಳಲ್ಲಿ ಸಮಾನ ದೃಷ್ಟಿಕೋನ ಇಟ್ಟುಕೊಂಡವರು ಉಪನ್ಯಾಸಗಳ ಮೂಲಕ ಹಿಂದೂ ಧರ್ಮ ಪರಂಪರೆ ಕಲೆ, ಸಾಹಿತ್ಯಗಳನ್ನೆಲ್ಲ ಪ್ರಪಂಚಕ್ಕೆ ಪರಿಚಯಿಸಿದ ಕೀರ್ತಿ ಅವರದು. ಮಾನವ ಬದುಕನ್ನು ತೀರ ಹತ್ತಿರದಿಂದ ಕಂಡುಕೊಂಡ ಅವರಿಂದ ಮೂಡಿಬಂದ 'ಸತ್ಯಾನ್ವೇಷಣೆ' ಎಂಬ ಕೃತಿ ಅವರ ಮಾನವೀಯತೆಗೆ ಹಿಡಿದ ಕನ್ನಡಿಯಾಗಿದೆ ಅವರು ದೀನದರಿದ್ರನ್ನು ದುಃಖಿತರನ್ನು ಸಂತೈಸುವ ಅಪಾರ ಮನಸ್ಸು ಹೊಂದಿದ್ದರು. ಆ ಕಾರ್ಯ ಅವರಿಂದ ಸರಿಯಾಗಿ ವ್ಯಾಪಕವಾಗಿ ಆಗದ್ದಕ್ಕಾಗಿ ಅವರು ನೊಂದುಕೊಂಡಿದ್ದರು. ಶ್ರೇಷ್ಠ ಶಿಕ್ಷಕ ವಿದ್ವಾಂಸರ ಆಡಳಿತಗಾರ ಉಪನ್ಯಾಸಕರಾಗಿದ್ದ ಅವರು ತತ್ವಗಳನ್ನು ಆದರ್ಶಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವುದರಲ್ಲೇ ಸಾರ್ಥಕತೆಯಿದೆ.

1975 ಎಪ್ರೀಲ್ 12 ರಂದು ಈ ಜ್ಯೋತಿ ನಂದಿದಾಗಿ ಭಾರತದ ಜನರಷ್ಟೇ ಅಲ್ಲ ಇಡೀ ಜಗತ್ತೆ ಶೋಕವನ್ನು ಆಚರಿಸಿತು. ಡಾ.. ಎಸ್ ರಾಧಾಕೃಷ್ಣನ್ನ ಅವರ ಪ್ರಮುಖ ಕೃತಿಗಳು

1) ರವೀಂದ್ರನಾಥ ಟ್ಯಾಗೋರರ ತತ್ವಜ್ಞಾನ, 2) ಸಮಕಾಲೀನ ತತ್ವಶಾಸ್ತ್ರದಲ್ಲಿ ಧರ್ಮದ ಆಳ್ವಿಕೆ, 3) ಭಾರತೀಯ ತತ್ವಶಾತತ್ವಶಾಸ್ತ್ರ, 4) ಹಿಂದೂ ಜೀವನ ದರ್ಶನ, 5) ಮತಧರ್ಮದಲ್ಲಿ ಪೂರ್ವ ಮತ್ತು ಪಶ್ಚಿಮ, 6) ಕಲ್ಕಿ ಅಥವಾ ನಾಗರೀಕತೆಯ ಭವಿಷ್ಯ, 7) ನಮಗೆ ಬೇಕಾದ ಧರ್ಮ, 8) ಗೌತಮ ಬುದ್ದ, 9) ಧರ್ಮ ಮತ್ತು ಸಮಾಜ, 10) ಶಿಕ್ಷಣ, ರಾಜಕೀಯ ಮತ್ತು ಯುದ್ಧ, 11) ಭಗವದ್ಗೀತೆ, 12) ಇದು ಶಾಂತಿಯೆ?, 13) ಸೃಜನಾತ್ಮಕ ಜೀವನ, 14) ಉಪನಿಷತ್ತುಗಳು ತತ್ವ ಚಿಂತನೆ, 15) ಭಾರತ ಮತ್ತು ಚೀನಾ, 16) ಸ್ವಾತಂತ್ರ್ಯ ಮತ್ತು ಸಂಸ್ಕೃತಿ, 17) ಭಾರತದ ಮಹಾಪುರುಷರು, 18) ನನ್ನ ಸತ್ಯಾನ್ವೇಷಣೆ, 19) ಹಿಂದುಸ್ಥಾನದ ಹೃದಯ, 20) ಚಿತ್ತದಾನವಾದಿಯ ಜೀವನ ದರ್ಶನ.

**ಶಬ್ದಗಳ ಅರ್ಥ:**

ಜಗದ್ವಿಖ್ಯಾತ - ಜಗತಪ್ರಸಿದ್ಧ; ಕಂಗಳು - ಕಣ್ಣುಗಳು;

## ಅಭ್ಯಾಸ

**ಕೃತಿ 1) ಕೆಳಗಿನ ಜಾಲಾಕೃತಿಯನ್ನು ಪೂರ್ಣಗೊಳಿಸಿರಿ.**




**ಕೃತಿ 2) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1) ರಾಧಾಕೃಷ್ಣನ್ನರ ಜನನ ಯಾವಾಗ ಆಯಿತು?

**ಉತ್ತರ:** ..................................................................................................

..................................................................................................

2) ರಾಧಾಕೃಷ್ಣನ್ನರ ತಂದೆ-ತಾಯಿಯರ ಹೆಸರು ಹೇಳಿರಿ?

**ಉತ್ತರ:** ..................................................................................................

..................................................................................................

3) ಮದ್ರಾಸ ವಿಶ್ವವಿದ್ಯಾಲಯವು ಯಾವ ಪದವಿಯನ್ನು ನೀಡಿ ಗೌರವಿಸಿತು?

**ಉತ್ತರ:** ..................................................................................................

..................................................................................................

4) ರಾಧಾಕೃಷ್ಣನರಿಗೆ ಅಪಾರ ಶಿಷ್ಯವೃಂದವಿತ್ತು ಎಂಬುದನ್ನು ಹೇಗೆ ನಿರೂಪಿಸುವಿರಿ?

**ಉತ್ತರ:** ..................................................................................................

..................................................................................................

5) ರಾಧಾಕೃಷ್ಣನ್ನರು ರಾಷ್ಟ್ರಪತಿಯಾಗಿ ಯಾವಾಗ ಆಯ್ಕೆಯಾದರು?

**ಉತ್ತರ:** ..................................................................................................

..................................................................................................

**ಕೃತಿ 3) ಬಿಟ್ಟಸ್ಥಳ ತುಂಬಿರಿ.**

1) ಸೆಪ್ಟೆಂಬರ 5 ರಂದು ...................... ಜನ್ಮದಿನವನ್ನು ಶಿಕ್ಷಕ ದಿನವಾಗಿ ಆಚರಿಸುತ್ತಾರೆ.
2) ...................... ವಿಶ್ವವಿದ್ಯಾಲಯದಿಂದ ...................... ರಲ್ಲಿ ಎಂಬ ಪದವಿ ಪಡೆದರು.
3) ಟಾಗೋರ ಅವರ ......................ಎಂಬ ಉನ್ನತ ಮಟ್ಟದ ಜ್ಞಾನಾಂತರ್ಗತ ಪುಸ್ತಕ ಪ್ರಕಟಿಸಿ ಜನಪ್ರಿಯರಾದರು.
4) ಡಾ॥ ರಾಧಾಕೃಷ್ಣನರು ಒಟ್ಟು ಆದರ್ಶ ......................
5) ...................... ಏಪ್ರಿಲ 17 ರಂದು ಈ ಜ್ಯೋತಿ ನಂದಿತು.

IL9X1X

**ಉಪಕ್ರಮ :** ನಮ್ಮ ದೇಶದ ಬೇರೆ ಬೇರೆ ಶಿಕ್ಷಣತಜ್ಞರ ಜೀವನಚರಿತ್ರೆಗಳನ್ನು ಓದಿ ತಿಳಿದುಕೊಳ್ಳಿರಿ.